ಉಪಾಧ್ಯಕ್ಷರು ಆಯಿತು ಈಗ ವಿರೋಧ ಪಕ್ಷದ ನಾಯಕರು ಮಾತನಾಡಿ

4 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ)**ವಿಷಯ** ಬೀದರ್ ಜಿಲ್ಲೆಯಲ್ಲಿ ಅಷೋಷಿತ ಬಂದನಿಂದಾಗಿ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ

ಶ್ರೀ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಬಂದಿದೆ ಎಲ್ಲಾ ಪತ್ರಿಕೆಗಳವರು ಕೂಡ ಈ ಬಗ್ಗೆ ಬರೆದಿದ್ದಾರೆ, ರಾತ್ರಿ ಅಘೋಷಿತ ಕರ್ಫ್ಯೂನಿಂದಾಗಿ ಎಲ್ಲಾ ಕಡೆಗಳಲ್ಲಿ ಭಯಭೀತ ವಾತಾವರಣ ಇದೆ " Police night vigil has citizens in raggers" ಎಂದು ಬರೆದಿದ್ದಾರೆ ಇವತ್ತು ಗೃಹ ಮಂತ್ರಿಗಳು ಸದನದಲ್ಲಿಲ್ಲ ಮಾನ್ಯ ಉಪಮುಖ್ಯ ಮಂತ್ರಿಗಳು ಇದ್ದಾರೆ ಗಡಿಭಾಗದಲ್ಲಿ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ಇದು ಪ್ರಪ್ರಥಮವಾಗಿಲ್ಲ ಅಲ್ಲಿರುವ ಪೊಲೀಸ್ ಅಧಿಕಾರಿಗಳ ಮೇಲೆ 10,000 ಜನ ದಲಿತರು ಪ್ರತಿಭಟನೆ ಮಾಡಿದ್ದಾರೆ ಬಹಳಷ್ಟು ಜನ ದಲಿತರು ಬೆಂಗಳೂರಿಗೆ ಬಂದು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳೂ ನನ್ನನ್ನೂ ಕೂಡ ಕಂಡು ಬೀದರ್ ಜಿಲ್ಲೆಯಲ್ಲಿ Law and Order ಇಲ್ಲವೆಂದು ಹೇಳಿದ್ದಾರೆ ಔರಾದ್ ತಾಲ್ಲೂಕು ನಕ್ಸಲೈಟ್ ಏರಿಯಾ ಆಗಿದೆ ಬೀದರ್ ಕರ್ನಾಟಕ ರಾಜ್ಯದ ಮೊಟ್ಟಮೊದಲನೇ ಕ್ಷೇತ್ರವಾಗಿದೆ ಇತ್ತೀಚೆಗೆ ಗುರುಪಾದಪ್ಪ ನಾಗಮಾರಪಲ್ಲಿಯವರ ಮಗ ವಿಜಯಕುಮಾರ್‌ರವರ ಕೊಲೆಯಾದಾಗಲೂ ಕೂಡ ಪೊಲೀಸ್ ಇಲಾಖೆಯವರು ಯಾರು ಹೋಗಿ ಅವರ ರಕ್ಷಣೆ ಮಾಡಲಿಲ್ಲ ಅಲ್ಲಿರುವ ಜಿಲ್ಲಾಧಿಕಾರಿಗಳು ಪೊಲೀಸ್ ಅಧಿಕಾರಿಗಳು ಇವತ್ತು ಸಾವಿರಾರು ಜನ, ಎಲ್ಲರನ್ನು ಅರೆಸ್ಟ್ ಮಾಡುತ್ತಿದ್ದಾರೆ ಅಲ್ಲಿನ ಜನರನ್ನು ಅವರು ನೋಡಬೇಕಾಗುತ್ತದೆ Terrorists ಬರುತ್ತಿದ್ದಾರೆ ಆ ಒಂದು ರಾಜ್ಯದಲ್ಲಿ ಬೀದರ್ ಜಿಲ್ಲೆಗೆ ಬಂಡೆಪ್ಪ ಕಾಶಂಪುರ್‌ರವರು ಉಸ್ತುವಾರಿ ಸಚಿವರಾಗಿದ್ದಾರೆ ಅಲ್ಲಿ ಅವರೂ ಕೂಡ ಆ ಜನರ ಕಷ್ಟವನ್ನು ಕೇಳುತ್ತಿಲ್ಲ ಈ ಬೀದರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಬೀದರ್ ಪೊಲೀಸ್ ಅಧಿಕಾರಿಗಳು ಗಡಿ ಭಾಗದಲ್ಲಿರತಕ್ಕಂಥ ಏನು ಒಂದು ಸಮಸ್ಯೆ ಇದೆ, police atrocity ಏನು ನಡೆಯುತ್ತಿದೆ ಇದರ ಬಗ್ಗೆ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ ಇದಕ್ಕೆ ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು ಇಷ್ಟೇ ಅಲ್ಲ, ಉಪಮುಖ್ಯಮಂತ್ರಿಗಳೇ ನಿನ್ನೆ ನಾಗರೀಕರ ಸಮಿತಿ ರಚನೆ ಮಾಡಿದ್ದಾರೆ ಎಲ್ಲಾ ಕಡೆ ಜಿಲ್ಲಾಧಿಕಾರಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಭೇಟಿಯಾಗಿ ನಮಗೆ ರಕ್ಷಣೆ ಇಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ ಇವತ್ತು ಬೀದರ್ ಹೈದ್ರಾಬಾದ್‌ನಲ್ಲಿ ಜನ ವ್ಯಾಪಾರಕ್ಕೆ ಹೋಗುತ್ತಾರೆ ಎಲ್ಲಿಯೂ ಕೂಡ ಈ ರೀತಿ ನಡೆಯುತ್ತಿಲ್ಲ ಎಲ್ಲಾ ಕಡೆ ಗುಲ್ಬರ್ಗಾದಲ್ಲಿ ನಡೆಯುತ್ತಿಲ್ಲ ಬೇರೆ

ಬೇರೆ ಕಡೆ ಬೆಳಗಾಂನಲ್ಲಿ ನಡೆಯುತ್ತಿಲ್ಲ ಬೀದರ್‌ನಲ್ಲಿ ನಡೆಯಬೇಕಾದರೆ ಅವರಿಗೆ ಹೇಗೆ protection ಕೊಡುವುದು? ಅಲ್ಲಿ ಮೊದಲಿದ್ದ ಪೊಲೀಸ್ ಅಧಿಕಾರಿ ಎಷ್ಟು ವರ್ಷ ಅಲ್ಲಿಯೇ ಕೆಲಸ ಮಾಡಿದ್ದರೂ ಮತ್ತೆ ಅವರಿಗೆ ಅಲ್ಲಿಗೆ ಪೋಸ್ಟಿಂಗ್ ಕೊಟ್ಟಿದ್ದಾರೆ "ನಾವು ಯಾರಿಗೆ ಪೋಸ್ಟಿಂಗ್ಸ್ ಕೊಡುತ್ತೀರಿ, ಯಾರಿಗೆ ಬಿಡುತ್ತೀರಿ" ಎಂದು ಹೇಳಲಿಕ್ಕೆ ಹೋಗುವುದಿಲ್ಲ ಒಂದು ಮಾತು ಹೇಳುತ್ತೇವೆ ಬೀದರ್ ಗಲಾಟೆ ವಿಷಯ ಕನ್ನಡ ಪ್ರಭ, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಬಂದಿದೆ ಒಂದು ರೀತಿಯ ಭಯಭೀತವಾದ ವಾತಾವರಣ ವಿಶೇಷವಾಗಿ ಇವತ್ತು ಬೀದರ್ ಜಿಲ್ಲೆ ಗಡಿಭಾಗದಲ್ಲಿ ಆಗಿದೆ ಯಾವ ಪ್ರಕರಣಕ್ಕೂ ನಿಮ್ಮ ಅಧಿಕಾರಿಗಳು ಹೋಗುವುದಿಲ್ಲ DIG ಹೋಗುವುದಿಲ್ಲ ಉನ್ನತ ಮಟ್ಟದ ಅಧಿಕಾರಿಗಳು ಹೋಗುತ್ತಿಲ್ಲ ಹಾಗಾಗಿ ಇವತ್ತಿನ ದಿವಸ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ ಈ ರೀತಿಯಾದ ಭಯಭಿತವಾದ ವಾತಾವರಣ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ ಮಾತನ್ನು ಕೂಡ ಸದನಕ್ಕೆ ತಿಳಿಸಬೇಕು ಮತ್ತು ನಮಗೆ ಇವತ್ತು ಸ್ಪಷ್ಟವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳೂ ಹೇಳಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು) ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಪ್ರತಿಪಕ್ಷದ ನಾಯಕರಾದಂಥ ಧರ್ಮಸಿಂಗ್ ರವರು ಶೂನ್ಯ ವೇಳೆಯಲ್ಲಿ ಪ್ರಮುಖವಾದ ವಿಚಯವನ್ನು ಪ್ರಸ್ತಾಪ ಮಾಡಿದ್ದಾರೆ ಇವತ್ತು ತತ್‌ಕ್ಷಣ ವರದಿಯನ್ನು ತರಿಸಿಕೊಂಡು ಇಂದು ಸಂಜೆ ಅಥವಾ ನಾಳೆ ನಾವು statement ಮಾಡುತ್ತೇವೆ ಎರಡನೆಯದಾಗಿ ತತ್‌ಕ್ಷಣ ಕಾನೂನು ಸುವ್ಯವಸ್ಥೆಗೆ ಅಡ್ಡಿಯಾಗದ ರೀತಿಯಲ್ಲಿ, ಸಾಮಾನ್ಯ ಜನರಿಗೆ ಯಾವುದೇ ರೀತಿಯ ಕಿರುಕುಳ ಕೊಡದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ ಘಟನೆ ನಡೆದಿರುವ ಬಗ್ಗೆ ವಿವರವಾದ ಮಾಹಿತಿಯನ್ನು ತರಿಸಿ ಇವತ್ತು ಅಥವಾ ನಾಳೆ ನಾನು statement ಮಾಡಿಸುತ್ತೇವೆ

ಉಪಾಧ್ಯಕ್ಷರು ಶ್ರೀ ವಾಟಾಳ್ ನಾಗರಾಜ್‌ರವರು ಮಾತನಾಡಿ

ಆ) ವಿಷಯ – ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಾಲ್ ಹೊಸೂರು ಗ್ರಾಮದ ಹೊರವಲಯದಲ್ಲಿ 200 ಕ್ಕೂ ಹೆಚ್ಚು ನವಿಲುಗಳ ಮರಣ ಹೋಮವಾಗಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ . ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಾಲೆಹೊಸೂರು ಗ್ರಾಮದ ಹೊರವಲಯದಲ್ಲಿ ಸುಮಾರು 200ಕ್ಕೂ ಹೆಚ್ಚು ನವಿಲುಗಳೊಂದಿಗೆ ಬೇರೆ ಬೇರೆ ಪಕ್ಷಿಗಳು, ಆಹಾರ ತಿನ್ನಲಿಕ್ಕೆ ಹೋದಂಥ ಬೇರೆ ಪ್ರಾಣಿಗಳು, ಎಮ್ಮೆ, ಹಸುಗಳು ಇವು ಸತ್ತಿರುವ ಬಹಳ ಗಂಭೀರ ಹಾಗೂ